ಆ) ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆಯನ್ನು ಗರಿಷ್ಠಗೊಳಿಸಲಾಗಿದೆ. ಅಲ್ಲದೇ ಕೇಂದ್ರ ಸರ್ಕಾರದ ವಿದ್ಯುತ್ ಉತ್ಪಾದನಾ ಕೇಂದ್ರಗಳಿಂದ ರಾಜ್ಯದ ವಿದ್ಯುತ್ ಪಾಲನ್ನು ಸಂಪೂರ್ಣವಾಗಿ ಪಡೆಯಲಾಗುತ್ತಿದೆ. ನೆರೆರಾಜ್ಯವಾದ ಮಹಾರಾಷ್ಟ್ರದಿಂದ ವಿದ್ಯುತ್ ನೆರವನ್ನು ಪಡೆಯಲು ಪ್ರಯತ್ನಿಸಲಾಗುತ್ತಿದೆ.

ಸೊರಬ ತಾಲ್ಲೂಕಿನಲ್ಲಿರುವ ಕೆರೆಗಳ ದುರಸ್ಥಿ.

21 (129)

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ 1997ರ ಅತಿವೃಷ್ಟಿ ಮಳೆಯಿಂದಾಗಿ ಒಡೆದುಹೋದ ಕೆರೆಗಳು ಎಷ್ಟು?

ಆ) ಸದರಿ ಕೆರೆಗಳ ದುರಸ್ಥಿಗಾಗಿ ಸರ್ಕಾರದವರು ಮಂಜೂರು ಮಾಡಿದ ಹಣವೆಷ್ಟು? ಹಾಗೂ ಖರ್ಚಾಗಿದ್ದ ಹಣವೆಷ್ಟು?

ಶ್ರೀ ತಿಪ್ಪೇಸ್ವಾಮಿ (ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು):

ಅ) 16 ಕೆರೆಗಳು.

ಆ) ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ 6.70 ಲಕ್ಷ ಅನುದಾನವನ್ನು ಹಾಗೂ ಅಧೀಕ್ಷಕ ಇಂಜಿನಿಯರ್ ಸಣ್ಣ ನೀರಾವರಿ ವೃತ್ತ, ಬೆಂಗಳೂರು, ಇವರಿಂದ 2.44 ಲಕ್ಷ ರೂ. ಒಟ್ಟು 9.14 ಲಕ್ಷ ರೂ.ಗಳು ಅನುದಾನವನ್ನು ಹಾನಿಗೊಳಪಟ್ಟ ಮತ್ತು ಒಡೆದುಹೋದ ಕೆರೆಗಳ ದುರಸ್ತಿಕಾರ್ಯಕ್ಕೆ ಒದಗಿಸಲಾಗಿದೆ. ಇದರಲ್ಲಿ 2.70 ಲಕ್ಷ ರೂ.ಗಳು ಖರ್ಚಾಗಿದೆ. ದುರಸ್ತಿ ಕಾರ್ಯ ಪ್ರಗತಿಯಲ್ಲಿದೆ.

ಮೈಸೂರು ನರಸಿಂಹ ರಾಜ ಕ್ಷೇತ್ರದಲ್ಲಿ ಅಸಮರ್ಪಕ ವಿದ್ಯುತ್ ಸರಬರಾಜು

22 (56)

ಶ್ರೀ ಇ.ಮಾರುತಿ ರಾವ್ ಪವಾರ್ (ನರಸಿಂಹರಾಜ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದ ಗಾಂಧಿನಗರ, ಕರುಣಾಪುರ ವ್ಯಾಪ್ತಿಗೆ ಟಿ.ನರಸೀಪುರದಿಂದ ಬರುವ ವಿದ್ಯುತ್ ಲೈನ್‌ನಿಂದ ಸರಬರಾಜು ಆಗುತ್ತಿದ್ದು ನಾರ್ತ್ ಈಸ್ಟ್ ಆಫ್ ಎನ್.ಆರ್.ಮೊಹಲ್ಲಾ ಪವರ್ ಹೌಸ್ ಅತೀ ಸಮೀಪವಿದ್ದು ಇದರಿಂದ

ಸರಬರಾಜು ಮಾಡದೇ ಇರಲು ಕಾರಣವೇನು?

ಆ) ಟಿ.ನರಸೀಪುರದಿಂದ ಬರುವ ವಿದ್ಯುತ್ ಸಂಪರ್ಕ ಲೋ ವೋಲ್ಟೇಜ್‌ನಿಂದಾಗಿ ಆ ಬಡಾವಣೆಯ ನಿವಾಸಿಗಳು ತೊಂದರೆ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ, ಈ ಬಡಾವಣೆಗಳಿಗೆ ನಾರ್ತ್‌ಈಸ್ಟ್ ಆಫ್ ಎನ್.ಆರ್.ಮೊಹಲ್ಲಾ ಪವರ್ ಹೌಸ್‌ನಿಂದ ವಿದ್ಯುತ್ ಸರಬರಾಜು ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?

ಶ್ರೀ ಶರಣ ಬಸಪ್ಪ ದರ್ಶಾನಾಪುರ (ಇಂಧನ ರಾಜ್ಯ ಸಚಿವರು):

ಅ) ನರಸಿಂಹರಾಜ ಕ್ಷೇತ್ರದ ಗಾಂಧಿನಗರ ಮತ್ತು ಕರುಣಾಪುರ ಪ್ರದೇಶಗಳಿಗೆ ಈ ಮುಂದೆ ಟಿ.ನರಸೀಪುರ ಗ್ರಾಮಾಂತರ ಫೀಡರ್‌ನಿಂದ ವಿದ್ಯುತ್ ಸರಬರಾಜಾಗುತ್ತಿದ್ದಿತು. ಸದರೀ ಫೀಡರ್ ಬಹಳ ಉದ್ದನೆಯ ಫೀಡರ್ ಆಗಿದ್ದರಿಂದ ಕಡಿಮೆ ವೋಲ್ಟೇಜ್ ಪರಿಸ್ಥಿತಿ ಮತ್ತು ಆಗಾಗ್ಗೆ ವಿದ್ಯುತ್ ಅಡಚಣೆ ಉಂಟಾಗುತ್ತಿತ್ತು.

ಆದರೆ ಈಗ್ಗೆ ಸುಮಾರು 6 ತಿಂಗಳುಗಳಿಂದ ಸದರೀ ಗಾಂಧಿನಗರ ಮತ್ತು ಕರುಣಾಪುರ ಪ್ರದೇಶಗಳಿಗೆ ಎಫ್.ಟಿ.ಎಸ್.ವಿದ್ಯುತ್ ಉಪಕೇಂದ್ರದಿಂದ ಹೊರಡುವ ಪೀಪಲ್ಸ್ ಪಾರ್ಕ್‌ಯೆಂಬ ಫೀಡರ್ ಮೂಲಕ ವಿದ್ಯುತ್ ಸರಬರಾಜು ಆಗುತ್ತಿದ್ದು, ಕಡಿಮೆ ವೋಲ್ಟೇಜ್ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗಿದೆ. ಅಲ್ಲದೇ ವಿದ್ಯುತ್ ಸರಬರಾಜಿನಲ್ಲಿ ತೊಂದರೆ ಸಾಕಷ್ಟು ಕಡಿಮೆ ಗೊಂಡಿದೆ.

ಆ ಮತ್ತು ಇ) ಈ ಪ್ರಶ್ನೆಯ ''ಅ'' ಭಾಗಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿರುವ ಪೋಲೀಸ್ ವಸತಿ ಗೃಹಗಳ ನಿವಾಸಿದಾರರಿಗೆ ರಸ್ತೆಸೌಲಭ್ಯ

23 (58)

ಶ್ರೀ ಇ.ಮಾರುತಿರಾವ್ ಪವಾರ್ (ನರಸಿಂಹರಾಜ ಕ್ಷೇತ್ರ): ಮಾನ್ಯ ಗೃಹ ಮತ್ತು ವಕ್ಫ್ ರಾಜ್ಯ ಸಚಾವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನರಸಿಂಹರಾಜ ಕ್ಷೇತ್ರದ ರಿಡ್ಜ್ ಹೌಸ್ ಹಿಂಭಾಗದ ನಾಲಾ ರಸ್ತೆಯಲ್ಲಿ ಹಲವಾರು ವರ್ಷಗಳಿಂದಲೂ ಗಾಯತ್ರಿಪುರಂ, ಜ್ಯೋತಿನಗರ ಪೋಲೀಸ್ ವಸತಿಗೃಹಗಳ ನಿವಾಸಿಗಳು ಎಸ್.ಪಿ. ಕಛೇರಿ ವೃತ್ತಕ್ಕೆ ಸಂಪರ್ಕ ರಸ್ತೆಯ ಅನ್ವಯ